# ಚಾರಿತ್ರಿಕ ಹಿನ್ನೆಲೆಯಲ್ಲಿ ಪ್ರಭುತ್ವ: ಕರ್ನಾಟಕ ಮತ್ತು ಕನ್ನಡ ಭಾಷೆ

**ಭವ್ಯ ಆರ್.**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸ ಗಂಗೋತ್ರಿ, ಮೈಸೂರು.

**Article Link: https://aksharasurya.com/2024/04/bhavya-r.php**

**DOI: https://doi.org/10.5281/zenodo.10929698**

## ABSTRACT:

ಭಾಷೆ ಮತ್ತು ಸಂಸ್ಕೃತಿ ಅಂತಃಸಂಬಂಧಿತವಾಗಿ ಏರ್ಪಟ್ಟ ರೂಪಕತೆಯಾಗಿದೆ. ಒಂದು ಪ್ರಾದೇಶಿಕ ಸಂಸ್ಕೃತಿ ರೂಪಿತವಾಗಲು ಅಲ್ಲಿಯ ಭಾಷೆಯೇ ಬಹುಮುಖ್ಯವಾದ ಅಂಶವಾಗಿರತ್ತದೆ. ಭಾಷೆ ಇರದೇ ಜಗತ್ತಿನ ಯಾವ ವ್ಯಾಪರವೂ ಇಲ್ಲ. ಜಗತ್ತಿನ ಚರಿತ್ರೆಯನ್ನು ಗಮನಿಸಿದರೆ ನಮಗೆ ವೇದ್ಯವಾಗುವ ಸತ್ಯ ಒಂದಿದೆ. ಯಾವ ಭಾಷೆಯು ಶ್ರೇಷ್ಠವಲ್ಲ, ಅದೇ ರೀತಿ ಯಾವ ಭಾಷೆಯೂ ಕನಿಷ್ಠವೂ ಅಲ್ಲ. ಜಗತ್ತಿನ ಭಾಷೆಗಳಲ್ಲಿ ಮೇಲು ಕೀಳು ಎಂಬ ಭಾವ ರೂಪಿತವಾಗಬೇಕಾದರೆ ಅದು ಕೇವಲ ಸಾಮಾಜಿಕ ಸಂಬಂಧಗಳಿಂದ, ರಾಜಕೀಯ ಪ್ರಭುತ್ವದಿಂದ ಮತ್ತು ಧಾರ್ಮಿಕ ಶ್ರೇಷ್ಠತೆಯ ಅಮಲಿನಿಂದ ಮಾತ್ರ ಆ ಪರಿಸ್ಥಿತಿ ನಿರ್ಮಾಣವಾಗಲು ಸಾಧ್ಯ. ಭಾಷೆಗಳನ್ನು ಆಡುವ ಸಮುದಾಯಗಳು ಚರಿತ್ರೆಯಲ್ಲಿ ಅನುಭವಿಸಿದ ಏರುಪೇರುಗಳು ಆಯಾ ಭಾಷೆಗಳ ಮೇಲೂ ಪರಿಣಾಮ ಬೀರಿರುತ್ತವೆ. ಪ್ರಬಲ ಪ್ರಭುತ್ವ ಅಧಿಕಾರವುಳ್ಳ ಸಮುದಾಯದ ಭಾಷೆಗೆ ಮೊದಲ ಮನ್ನಣೆ, ರಾಜ ಗೌರವ, ಪ್ರಾಶಸ್ತ್ಯ, ಅಧಿಕಾರದ ಆಡಳಿತದ ಧ್ವನಿಯಾಗುತ್ತದೆ. ಹತ್ತು ಹಲವು ಬಗೆಗಳಲ್ಲಿ ಆ ಸಂಸ್ಕೃತಿ ಮತ್ತು ಭಾಷೆ ಹೆಚ್ಚಾಗಿ ಬಳಕೆಗೆ ರೂಢಿಗೆ ಬರುತ್ತದೆ. ಅಧಿಕಾರದೊಂದಿಗೆ ಪ್ರಭುತ್ವದ ಪತನ ಅಥವಾ ಅಧಿಕಾರ ಹಸ್ತಾಂತರವಾದಗ ಅದು ಬೇರೊಂದು ಭಾಷೆಗೆ ವರ್ಗಾವಣೆಗೊಳ್ಳುವುದು. ಸಂಸ್ಕೃತ, ಗ್ರೀಕ್, ಲ್ಯಾಟಿನ್, ಪರ್ಸೋ, ಅರಾಬಿಕ್ ಮತ್ತು ಇಂಗ್ಲೀಷ್ ಭಾಷೆಗಳು ಜಗತ್ತಿನ ಚರಿತ್ರೆಯಲ್ಲಿ ಪಡೆದ ಮನ್ನಣೆಯನ್ನು ಗಮನಿಸಿದರೆ, ಪ್ರಭುತ್ವದ ಬಲ ಮತ್ತು ಭಾಷೆಯ ಶ್ರೇಷ್ಠತೆಯ ಮನ್ನಣೆ ಹೇಗೆ ಲಭಿಸಿವೆ ಎಂಬ ಸಂದರ್ಭಗಳೂ ನಮಗೆ ಗೋಚರವಾಗುತ್ತವೆ. ಆಯಾ ಭಾಷೆಗಳ ಚಾರಿತ್ರಿಕ ಬೆಳವಣಿಗೆಯಲ್ಲಿ ಹೇಗೆ ಮನ್ನಣೆ ಪಡೆದು ಮುನ್ನೆಲೆಗೆ ಬಂದಿರುವುದಕ್ಕೆ ಅದರ ಅಂತರ್ಗತ ಲಕ್ಷಣಗಳಷ್ಟೇ ಕಾರಣವಲ್ಲ. ಪ್ರಭುತ್ವದ ಚಾರಿತ್ರಿಕ ಯಜಮಾನಿಕೆಯೇ ಮೊದಲ ಪ್ರಬಲ ಬಲವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾಷೆಯ ಜೊತೆಗಿನ ಸಂಸ್ಕೃತಿ ಮತ್ತು ಚರಿತ್ರೆಯ ಜೊತೆಗಿನ ಪ್ರಭುತ್ವನ್ನು ಪ್ರಮುಖ ಅಂಶವಾಗಿ ಎಲ್ಲಾ ಸಂಶೋಧನೆಗಳು ಪರಿಗಣಿಸಲಾಗಿದೆ.

**KEYWORDS:**
ಅರಿಸ್ಟಾಟಲ್, ಎಮ್ಮೆಮಾಳ, ಎರುಮೆನಾಡು, Evolutionary, Force Theory, Divine Right Theory, Social Contract theory.

ಪ್ರಜೆಗಳಿಗೆ ಅನುಕೂಲವಾಗುವ ಕಾನೂನುಗಳನ್ನು ರಚಿಸುವ ಮತ್ತು ಅದನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಪ್ರಭುತ್ವದ ಸರ್ಕಾರ ಹೊಂದಿರುತ್ತವೆ. ಪ್ರಭುತ್ವವು ತನ್ನ ಆಳ್ವಿಕೆಯನ್ನು ಪ್ರಭುತ್ವದಿಂದ ಕೂಡಿದ ಸರ್ಕಾರದಿಂದ ವ್ಯವಸ್ಥೆಯನ್ನು ರೂಪಿಸುತ್ತವೆ. 'ಸರ್ಕಾರವನ್ನು ಕುರಿತಾದ ಮೂಲ ಪ್ರಶ್ನೆಯು ಕೇವಲ ಐತಿಹಾಸಿಕ ವಿಷಯವಲ್ಲ; ಅದು ವಿಶ್ವದ ಎಲ್ಲ ಭಾಗದಲ್ಲೂ ತನ್ನದೆ ನೆಲೆಯಲ್ಲಿ ರೂಢಿಗತವಾಗಿದೆ ನಡೆದು ಬಂದಿವೆ. (ಅಂದರೆ ಇದು ಸರ್ಕಾರಗಳು ಹೇಗಿರಬೇಕು ಎಂಬುದರ ಕುರಿತು ವ್ಯವಹರಿಸುತ್ತದೆ). ಸರ್ಕಾರಗಳು ಹೇಗೆ ಹುಟ್ಟಿಕೊಂಡವು ಎಂಬ ಸಿದ್ಧಾಂತವು, ಸರ್ಕಾರಗಳು ಏನು ಮಾಡಬೇಕು ಮತ್ತು ಅವರು ಅದನ್ನು ಹೇಗೆ ಮಾಡಬೇಕು ಎಂಬುದಕ್ಕೆ ಸುಳಿವನ್ನು ನೀಡುತ್ತದೆ. ಕನಿಷ್ಠ ಪಕ್ಷ, ಸರ್ಕಾರವು ಸಮುದಾಯವನ್ನು ನಿರ್ವಹಿಸುವ, ನಿಯಂತ್ರಿಸುವ ಮತ್ತು ಇತರ ರೀತಿಯಲ್ಲಿ ಆಡಳಿತ ನಡೆಸುವ ಸಂಸ್ಥೆಗಳು ಮತ್ತು ವ್ಯವಸ್ಥೆಗಳನ್ನು ಒಳಗೊಂಡಿರುತ್ತವೆ. ಪರಿಣಾಮವಾಗಿ, ಎಲ್ಲಾ ಸಿದ್ಧಾಂತಗಳು ಹಾಗೂ ಅವುಗಳಿಂದ ರೂಪಿತವಾದ ಸರ್ಕಾರಗಳು ಕನಿಷ್ಠ ಕೆಲವು ಸ್ಥಿರತೆಯ ಮೂಲವನ್ನು ಒದಗಿಸುತ್ತವೆ ಮತ್ತು ಸಂಕೀರ್ಣವಾದ ಸಂಘಟನೆಗೆ ಅವಕಾಶ ನೀಡುತ್ತವೆ. ಉಳಿದಂತೆ ಅವುಗಳು ಅದರದೆ ಆದ ತನ್ನ ಮೂಲ ನಿಲುವಿಗೆ ಸರ್ಕಾರಗಳು ಶಾಶ್ವತವಾಗಿ ಉಳಿದುಕೊಳ್ಳುತ್ತವೆ.

ಮನುಷ್ಯ ತನ್ನ ವ್ಯವಹಾರಗಳ ರಕ್ಷಣೆಗೆ ಪ್ರಭುತ್ವಗಳ ನೇತೃತ್ವದಲ್ಲಿ ಇರುವ ಸರ್ಕಾರದ ಕೃಪಾ ನೆರಳನ್ನು ಬಯಸುವುದು ಸರ್ವೇ ಸಾಮಾನ್ಯವಾದ ಪ್ರಭುತ್ವದ ಬೆಳವಣಿಗೆ. ಇಂತಹ ಬೆಳವಣಿಗೆಯ ನೆಲೆಗಳು ಆರಂಭವಾದದ್ದು ಇಂದು ನೆನ್ನೆಯದಲ್ಲ. ನಾಗರಿಕತೆಯ ಮೂಲಕ್ಕೂ ಅದು ಅನ್ವಯಿಸುತ್ತದೆ. ಹೆಚ್ಚಿನ ಜನಸಂಖ್ಯೆ ಮತ್ತು ಸಂಪತ್ತಿನ ಕ್ರೋಢೀಕರಣ ಹೆಚ್ಚಾದಂತೆ ಅದರ ರಕ್ಷಣೆ ಮತ್ತು ತನ್ನದೇ ಆದ ಪೃಭುತ್ವ ನಿರ್ಮಾಣಕ್ಕೆ ಸರ್ಕಾರಗಳನ್ನು ರಚಿಸಿಕೊಂಡು ಮನುಷ್ಯ ನಿರ್ವಹಣೆ ಮಾಡತೊಡಗಿದ. ಅಂದಿಗೆ ಆದಾಯದ ಮೂಲವಾಗಿ ಪಶುಪಾಲನೆ, ನಂತರ ಕೃಷಿ ಕ್ಷೇತ್ರ ಹೀಗೆ ಸಾಕಷ್ಟು ಅಭಿವೃದ್ಧಿಗೊಂಡ ಆರಂಭಿಕ ದಿನಗಳಲ್ಲಿ ಪ್ರಭುತ್ವ ಮತ್ತು ಅದರ ಸರ್ಕಾರಗಳು ಹೊರಹೊಮ್ಮಿದವು. ಮೊದಲ ನಾಗರಿಕತೆಯು ಸುಮೇರ್‌ನಲ್ಲಿ ಸುಮಾರು 4500 ರಿಂದ 4000 ಃಅಇ ಯಲ್ಲಿ ಹೊರಹೊಮ್ಮಿತು, ಇಂದು ಆ ಪ್ರದೇಶ ಆಧುನಿಕ ಇರಾಕ್ ಆಗಿದೆ. ಮುಂಚಿನ ಸರ್ಕಾರಗಳು ಸಂಪತ್ತಿನ ಬಗ್ಗೆ

ಆಂತರಿಕ ವಿವಾದಗಳನ್ನು ನಿರ್ವಹಿಸುವುದರೊಂದಿಗೆ ಮಾತ್ರವಲ್ಲದೆ ಆಕ್ರಮಣಕಾರರು ಮತ್ತು ಅನಾಗರಿಕರ ವಿರುದ್ಧ ಸಾಮಾನ್ಯರ ರಕ್ಷಣೆಯನ್ನು ಒದಗಿಸುವ ಸಲುವಾಗಿ ಹಲವು ಕಡೆ ಪ್ರಭುತ್ವಗಳು ಹುಟ್ಟುಕೊಳ್ಳುವುದರ ಮೂಲಕದ ಸರ್ಕಾರಗಳ ಉದಯವಾಯಿತು.

ಕಾಲಾನಂತರದಲ್ಲಿ, ನಾಗರಿಕತೆಗಳು ಹೆಚ್ಚು ಅತ್ಯಾಧುನಿಕವಾದವು, ಮತ್ತು ಅವರೊಂದಿಗೆ, ಅವರ ಸರ್ಕಾರಗಳು ವಿಭಿನ್ನ ಪಾತ್ರಗಳನ್ನು ವಹಿಸಿಕೊಂಡವು. ಪುರಾತನ ಗ್ರೀಕ್ ನಗರ–ರಾಜ್ಯಗಳು ಪುರಾತನ ನಾಗರಿಕತೆಗಳಿಗೆ ಒಂದು ಸಾಧನೆಯನ್ನು ಪ್ರತಿನಿಧಿಸುತ್ತವೆ, ಆ ನಗರ–ರಾಜ್ಯಗಳ ನಾಗರಿಕರು ಸರ್ಕಾರದಲ್ಲಿ ಭಾಗವಹಿಸಲು ಸಾಧ್ಯವಾಯಿತು. ವಿಶೇಷವಾಗಿ ಅಥೆನಿಯನ್ ಪ್ರಜಾಪ್ರಭುತ್ವದ ಉದಾಹರಣೆಯಲ್ಲಿ, ಸರ್ಕಾರವು ಕೇವಲ ಒಂದು ಜನರ ಅಗತ್ಯ ರಕ್ಷಣೆಯಾಗಿ ಪರಿಗಣಿಸಲ್ಪಟ್ಟಿಲ್ಲ, ಜನರು ತಮ್ಮ ಸಮುದಾಯವನ್ನು ರೂಪಿಸಲು ಇದು ಒಂದು ಅವಕಾಶವಾಗಿದೆ. ಅಥೆನಿಯನ್ನರು ಸರ್ಕಾರದ ಬಗ್ಗೆ ಸಿದ್ಧಾಂತವನ್ನು ರೂಪಿಸುವ ಹೊತ್ತಿಗೆ, ಈಗಾಗಲೇ ಹಲವಾರು ಸಂಭಾವ್ಯ ಸರ್ಕಾರಗಳು ಆಡಳಿತದಲ್ಲಿ ಇದ್ದು ಹೋಗಿದ್ದವು. ಅದಲ್ಲದೆ, ನ್ಯಾಯಸಮ್ಮತವಾದ ಪ್ರಭುತ್ವ ಮತ್ತು ಅದರ ಸರ್ಕಾರ ಹೇಗೆ ಹುಟ್ಟುತ್ತದೆ ಎಂಬ ವಿಷಯವು ಇಂದಿನಂತೆ ಅಂದು ಚರ್ಚಾಸ್ಪದವಾಗಿತ್ತು.

“There are 4 theories of government to be reviewed. Each of them is making a claim about how government came into being generally. Theories of government are not necessarily inquiries into which government or civilization is in fact, the first. Rather, the theories of government aim to explain the impetus to enter into a society with government. The four theories are evolutionary, force, divine right, and social contract.”
:-Aristotle (Political theory of Aristotle)

ಸರ್ಕಾರದ 4 ಸಿದ್ಧಾಂತಗಳನ್ನು ಪರಿಶೀಲಿಸಬೇಕಾಗಿದೆ. ಪ್ರತಿಯೊಬ್ಬರೂ ಸಾಮಾನ್ಯವಾಗಿ ಸರ್ಕಾರ ಹೇಗೆ ಅಸ್ತಿತ್ವಕ್ಕೆ ಬಂದಿತು ಎಂಬುದರ ಬಗ್ಗೆ ಪ್ರತಿಪಾದಿಸುತ್ತಿದ್ದಾರೆ. ಪ್ರಭುತ್ವ ಸರ್ಕಾರದ ಸಿದ್ಧಾಂತಗಳು ವಾಸ್ತವವಾಗಿ ಯಾವ ಸರ್ಕಾರ ಅಥವಾ ನಾಗರಿಕತೆಯ ಬಗ್ಗೆ ವಿಚಾರಣೆಯಾಗಿರುವುದಿಲ್ಲ. ಬದಲಾಗಿ, ಪ್ರಭುತ್ವದ ಸಿದ್ಧಾಂತಗಳು ಸರ್ಕಾರದೊಂದಿಗೆ ಸಮಾಜಕ್ಕೆ ಪ್ರವೇಶಿಸುವ ಪ್ರಚೋದನೆಯನ್ನು ವಿವರಿಸುವ ಗುರಿಯನ್ನು ಹೊಂದಿವೆ. ಹಿಡಿ ವಿಶ್ವದ ಒಟ್ಟು

ಇತಿಹಾಸವನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ಪ್ರಮುಖ ನಾಲ್ಕು ಸಿದ್ಧಾಂತಗಳು ಪ್ರಭುತ್ವದ ಸ್ಥಾಪನೆ ಮತ್ತು ಸರ್ಕಾರಗಳ ಹುಟ್ಟಿಗೆ ಕಾರಣವಾಗಿದೆ. 1. ವಿಕಾಸವಾದ, 2. ಬಲ ವಾದ 3. ದೈವಿಕ ಹಕ್ಕಿನವಾದ ಮತ್ತು 4. ಸಾಮಾಜಿಕ ಒಪ್ಪಂದ.

» Evolutionary Theory.

» Force Theory.

» Divine Right Theory.

» Social Contract theory.

ಪ್ರಭುತ್ವದ ವಿಕಾಸವಾದದ ಸಿದ್ಧಾಂತವು ಅದರ ಸರ್ಕಾರ ಸ್ವಾಭಾವಿಕವಾಗಿ ಕುಟುಂಬಗಳು, ಕುಲಗಳು ಮತ್ತು ಬುಡಕಟ್ಟುಗಳ ಸಂಘವಾಗಿ ಹೊರಹೊಮ್ಮಿವೆ ಎಂದು ಹೇಳುಬಹುದು. ಈ ಹೀಗೆ ಇತರ 'ನೈಸರ್ಗಿಕ' ಗುಂಪುಗಳು ಸೃಷ್ಟಿಸಿದ ಅಗತ್ಯಗಳನ್ನು ತುಂಬಲು ಪ್ರಭುತ್ವ ಪೂರ್ಣ ಸರ್ಕಾರ ಹೊರಹೊಮ್ಮಿತು. ಅರಿಸ್ಟಾಟಲ್ ಸರ್ಕಾರದ ವಿಕಾಸವಾದದ ಸಿದ್ಧಾಂತವನ್ನು ಮುಂದಿಟ್ಟರು. ಉದಾ: ಒಂದು ಕುಟುಂಬದೊಳಗಿನ (ಅಥವಾ ಸಾಮಾನ್ಯವಾಗಿ ಮನೆಯೊಳಗೆ) ಜೀವನವು ಹಸಿವು, ನಿದ್ರೆ, ಸಂತಾನೋತ್ಪತ್ತಿ ಮತ್ತು ಮುಂತಾದ ಖಾಸಗಿ ಅಗತ್ಯಗಳನ್ನು ಪೂರೈಸಲು ಮೀಸಲಾಗಿರುತ್ತದೆ. ಆದಾಗ್ಯೂ, ಮನೆಯ ಸಂಪನ್ಮೂಲಗಳನ್ನು ಸುರಕ್ಷಿತಗೊಳಿಸುವುದು, ಉದಾಹರಣೆಗೆ ಉಪಭೋಗ್ಯವನ್ನು ಭದ್ರಪಡಿಸುವುದು, ವ್ಯಾಪಾರವನ್ನು ನಿಯಂತ್ರಿಸಲು ಕಾನೂನುಗಳನ್ನು ಸ್ಥಾಪಿಸುವುದು, ಕಳ್ಳತನ ಅಥ ವಾ ಆಕ್ರಮಣದಿಂದ ಮನೆಯವರನ್ನು ರಕ್ಷಿಸುವುದು ಇತ್ಯಾದಿಗಳಿಗೆ ಸಂಘಟನೆಯ ದೊಡ್ಡ ರೂಪದ ಅಗತ್ಯವಿದೆ. ಆದ್ದರಿಂದ, ಈ ಅಗತ್ಯಗಳನ್ನು ಪೂರೈಸಲು ಸಹಾಯ ಮಾಡಲು ಪ್ರಭುತ್ವದ ಸ್ಥಾಪನೆ ಕರ್ತವ್ಯ ನಿರ್ವಹಣೆಗೆ ಸರ್ಕಾರವು ಉದ್ಭವಿಸುತ್ತವೆ ಮತ್ತು ನಾಗರಿಕರ ನಡುವೆ ದೀರ್ಘಕಾಲೀನ ಕುಟುಂಬೇತರ ಕಾರ್ಯ ನಿರ್ವಹಣಾ ಸಂಬಂಧಗಳನ್ನು ಸ್ಥಾಪಿಸುತ್ತದೆ.

ಪ್ರಭುತ್ವ ಪೂರ್ಣ ಸರ್ಕಾರದ ಉದಾಹರಣೆಯ ವಿಕಸನೀಯ ಸಿದ್ಧಾಂತವು ಪ್ರಾಚೀನ ಗ್ರೀಕ್ ನಗರ–ರಾಜ್ಯಗಳನ್ನು ಒಳಗೊಂಡಿವೆ, ಏಕೆಂದರೆ ಅವರು ಪೌರತ್ವವನ್ನು ನೀಡುವಲ್ಲಿ ಕೌಟುಂಬಿಕ ಸಂಬಂಧಗಳನ್ನು ಒತ್ತಿಹೇಳಲಾಗಿದೆ. ಹಲವಾರು ರಾಜ್ಯಗಳ ಕಾನೂನುಬದ್ಧ ಆಡಳಿತಗಾರರು ಕೌಟುಂಬಿಕ ಸಂಬಂಧಗಳಿಂದ ಸಂಬಂಧ ಹೊಂದಿರುವುದರಿಂದ ಹ್ಯಾಬ್ಸ್ಬರ್ಗ್ ರಾಜವಂಶದ ರಾಜಪ್ರಭುತ್ವ ಸರ್ಕಾರದ

ವಿಕಸನೀಯ ಸಿದ್ಧಾಂತವನ್ನು ಸಹ ಉದಾಹರಿಸಬಹುದು. ಸರ್ಕಾರದ ಈ ಸಿದ್ಧಾಂತವು ಮಹತ್ವದ್ದಾಗಿದೆ ಏಕೆಂದರೆ ಇದು ಕೆಲವು ಹಳೆಯ ನಾಗರಿಕತೆಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ, ಆದರೆ ಇದು ಸಮುದಾಯವನ್ನು ನೈಸರ್ಗಿಕ ಮತ್ತು ಅಹಿಂಸಾತ್ಮಕವಾಗಿ ರೂಪಿಸಲಾಗಿದೆ. ಕನಿಷ್ಠ, ಆಂತರಿಕ ರಾಜಕೀಯ ವ್ಯವಹಾರಗಳು ಕಟ್ಟುನಿಟ್ಟಾದ 'ಬಲ' ಸಿದ್ಧಾಂತದ ವಿಷಯವಲ್ಲ.

**ಸರ್ಕಾರದ ಮೂಲದ ಸಿದ್ಧಾಂತಗಳು:** ರಾಜ್ಯ ಮತ್ತು ಸಂಘಟಿತ ಸರ್ಕಾರದ ಮೂಲದ ಬಗ್ಗೆ ಶತಮಾನಗಳಿಂದ ಚರ್ಚಿಸಲಾಗಿವೆ. ಯಾವುದೇ ಪ್ರಸ್ತಾವಿತ ಸಿದ್ಧಾಂತಗಳನ್ನು ಬೆಂಬಲಿಸಲು ಯಾವುದೇ ಘಟ್ಟಿಯಾದ (ಕಾಂಕ್ರೀಟ್) ಪುರಾವೆಗಳಿಲ್ಲ, ಇದು ಕೇವಲ ಊಹಾಪೋಹವಾಗಿ ಉಳಿದಿದೆ. ಈ ಸಿದ್ಧಾಂತವೂ ಪ್ರತಿಯೊಂದು ಹಂತದಲ್ಲೂ ಹೆಚ್ಚು ಅಂಗೀಕರಿಸಲ್ಪಟ್ಟ ಸಿದ್ಧಾಂತಗಳು, ರಾಜ್ಯವು ಕೆಲವು ಮೂಲಭೂತ ಅಂಶಗಳನ್ನು ಹೊಂದಿರಬೇಕು ಎಂದು ಒಪ್ಪಿಕೊಳ್ಳುತ್ತದೆ ಉದಾ: ಪ್ರದೇಶ, ಜನಸಂಖ್ಯೆ, ಪ್ರಭುತ್ವ–ಸರ್ಕಾರ ಮತ್ತು ಸಾರ್ವಭೌಮತ್ವ.

**ಬಲದ ಸಿದ್ಧಾಂತ:** ಈ ಸಿದ್ಧಾಂತವು ತನ್ನ ಪ್ರಭುತ್ವನ್ನು ಸ್ಥಿರವಾದ ತನ್ನ ಭೌಗೋಳಿಕ ಕಕ್ಷೆಯೊಳಗಿನ ರಾಜ್ಯದ ಮೂಲವನ್ನು, ತನ್ನ ಬಲದ ಬಳಕೆಯ ಮೂಲಕ ಅಭಿವೃದ್ಧಿಪಡಿಸಲಾಗಿದೆ ಎಂದು ಪ್ರತಿಪಾದಿಸುತ್ತವೆ. ಒಬ್ಬ ವ್ಯಕ್ತಿ ಅಥವಾ ಒಂದು ಸಣ್ಣ ಗುಂಪಿನ ಜನರು ಬಲವಂತವಾಗಿ ನಿರ್ದಿಷ್ಟ ಪ್ರದೇಶದಲ್ಲಿ ಜನಸಂಖ್ಯೆಯ ಮೇಲೆ ನಿಯಂತ್ರಣವನ್ನು ಹೊಂದುವುದಾಗಿದೆ. ಪ್ರಭುತ್ವ ತನ್ನ ಸರ್ಕಾರದ ಮೂಲಕ ಆಡಳಿತವನ್ನು ಸುಸ್ಥಾಪಿತವಾಗಿ ಸ್ಥಾಪಿಸಿದ ನಂತರ ರಾಜ್ಯ ಸ್ಥಾಪನೆಯಾಗುತ್ತದೆ. ಈ ಸಿದ್ಧಾಂತವು ಸಾಮಾನ್ಯವಾಗಿ ಯುದ್ಧದ ಫಲಿತಾಂಶವಾಗಿದೆ. ಒಂದು ಉದಾಹರಣೆ: ಅಡಾಲ್ಫ್ ಹಿಟ್ಲರ್ ಮತ್ತು ಜರ್ಮನಿಯ ಮೇಲಿನ ಅವನ ನಿಯಂತ್ರಣವು ಯುರೋಪ್ನ ಪ್ರಯತ್ನದ ನಿಯಂತ್ರಣಕ್ಕೆ ಕಾರಣವಾಯಿತು, ಜೊತೆಗೆ ಯಹೂದಿ ಜನಸಂಖ್ಯೆಯ ಸಾಮೂಹಿಕ ನರಮೇಧಕ್ಕೆ ಕಾರಣವಾಯಿತು.

**ವಿಕಸನ ಸಿದ್ಧಾಂತ:** ಈ ಸಿದ್ಧಾಂತವು ಆ ಮೂಲಕ ಸ್ಥಾಪಿತವಾದ ರಾಜ್ಯವು ಕಾಲಾನಂತರದಲ್ಲಿ ವಿಕಸನಗೊಂಡಿತು ಎಂದು ಹೇಳುತ್ತದೆ, ಇದು ಪ್ರಾಚೀನ ಕುಟುಂಬದಿಂದ ಪ್ರಾರಂಭವಾಗುತ್ತದೆ. ಕುಟುಂಬದ ಒಬ್ಬ ವ್ಯಕ್ತಿಯನ್ನು ಕುಟುಂಬದ ನಾಯಕ ಎಂದು ನಿರ್ಧರಿಸಲಾಯಿತು. ಪ್ರಾಚೀನ ಮಟ್ಟದಲ್ಲಿ, ಮೂಲಭೂತ ಸರ್ಕಾರವನ್ನು ರಚಿಸಲಾಯಿತು. ದಶಕಗಳಲ್ಲಿ, ಕುಟುಂಬವು ಕುಲವಾಯಿತು ಮತ್ತು ಕುಲವು ಬುಡಕಟ್ಟು ಆಯಿತು. ಬುಡಕಟ್ಟು ಜನಾಂಗದವರು ಗೊತ್ತುಪಡಿಸಿದ ಪ್ರದೇಶದಲ್ಲಿ ನೆಲೆಸಿದಾಗ ಮತ್ತು ಅದನ್ನು ತಮ್ಮದೆಂದು ಹೇಳಿದಾಗ ಆ ಸಂದರ್ಭದಲ್ಲಿ

ರಾಜ್ಯವನ್ನು ಗುರುತಿಸಲಾಯಿತು.

**ದೈವಿಕ ಬಲ ಸಿದ್ಧಾಂತ:** ದೈವಿಕ ಬಲ ಸಿದ್ಧಾಂತವು ದೇವರು ರಾಜ್ಯವನ್ನು ಸೃಷ್ಟಿಸಿದನು ಎಂದು ಹೇಳುತ್ತದೆ. ದೇವರು ರಾಜ್ಯವನ್ನು ಆಳುವ ಸಲುವಾಗಿ, ದೇವರ ಕೃಪೆಯಿಂದ ಜನಿತವಾದ ಕೆಲವು ವ್ಯಕ್ತಿಗಳಿಗೆ ಪ್ರಭುತ್ವವನ್ನು ಆಳುವ ದೈವಿಕ ಹಕ್ಕನ್ನು ಕೊಟ್ಟನು. ದೇವರು ಅದರ ಆಡಳಿತಗಾರರನ್ನು ದೈವಿಕವಾಗಿ ನೇಮಿಸಿದ್ದ ರಿಂದ ಮತ್ತು ಅವರು ದೇವರಿಗೆ ಜವಾಬ್ದಾರರಾಗಿರುವುದರಿಂದ, ಜನರು ದೇವ ರಿಗೆ ವಿಧೇಯರಾಗಲು ಅಗತ್ಯವಿರುವಂತೆ ಆಡಳಿತಗಾರನಿಗೆ ವಿಧೇಯರಾದರು. ಈ ಸಿದ್ಧಾಂತವು ಮಧ್ಯಯುಗದ ಉದ್ದಕ್ಕೂ ಇಂಗ್ಲೆಂಡ್ ಮತ್ತು ಯುರೋಪ್ನಂತಹ ಅನೇಕ ದೇಶಗಳಲ್ಲಿ ಅಸ್ತಿತ್ವದಲ್ಲಿತ್ತು.

**ಸಾಮಾಜಿಕ ಒಪ್ಪಂದದ ಸಿದ್ಧಾಂತ:** ಸಾಮಾಜಿಕ ಒಪ್ಪಂದದ ಪ್ರಭುತ್ವದ ಸಿದ್ಧಾಂತದಲ್ಲಿ, ನಿರ್ದಿಷ್ಟವಾಗಿ ಗೊತ್ತುಪಡಿಸಿದ ಪ್ರದೇಶದೊಳಗಿನ ನಿರ್ದಿಷ್ಟ ಜನಸಂಖ್ಯೆಯ ಎಲ್ಲರ ಯೋಗಕ್ಷೇಮವನ್ನು ಉತ್ತೇಜಿಸಲು ಅಗತ್ಯವಿರುವಷ್ಟು ಅಧಿಕಾರವನ್ನು ಒಪ್ಪಿತ ವ್ಯವಸ್ಥಿತ ಪ್ರಭುತ್ವದ ಸರ್ಕಾರಕ್ಕೆ ಬಿಟ್ಟುಕೊಡುವುದು. ನಿರ್ದಿಷ್ಟವಾಗಿ ಹೇಳುವುದಾದರೆ, ಸಮುದಾಯದ ಜನಸಂಖ್ಯೆ ಮತ್ತು ಪ್ರಭುತ್ವದ ಪ್ರತಿನಿಧಿಯತ್ವದ ನಾಯಕನು ಕರಾರುಗಳಿಂದ ನಿರ್ದೇಶಿತವಾದ ಒಪ್ಪಂದದಕ್ಕೆ ಬದ್ಧನಾಗಿರುತ್ತಾನೆ ಅಥವಾ ಜವಾಬ್ದಾರಿ ಹೊಂದಿರುತ್ತಾನೆ. ಇಂತಹ ಪ್ರಭುತ್ವದಿಂದ ರೂಪಿತವಾದ ರಾಜ್ಯವು ಆ ಪ್ರದೇಶದ ಮೇಲೆ ಅಧಿಕಾರ ಮತ್ತು ಪ್ರಭುತ್ವವನ್ನು ಹೊಂದಿರುತ್ತದೆ. ಸಮುದಾಯವು ಸುರಕ್ಷಿತ, ಅಪರಾಧ-ಮುಕ್ತ ಪ್ರದೇಶದಂತಹ ಕೆಲವು ಸೇವೆಗಳನ್ನು ಪಡೆಯುತ್ತದೆ, ಅದರಲ್ಲಿ ವಾಸಿಸಲು ಮತ್ತು ಅವರ ಹಕ್ಕುಗಳನ್ನು ಗೌರವ ಮತ್ತು ಜವಾಬ್ದಾರಿಯಿಂದ ರಕ್ಷಿಸುವುದಾಗಿದೆ..

ಈ ಸಿದ್ಧಾಂತವನ್ನು ಥಾಮಸ್ ಹಾಬ್ಸ್, ಜಾನ್ ಲಾಕ್ ಮತ್ತು ಜೀನ್ ಜಾಕ್ವೆಸ್ ರೂಸೋ ಅವರಂತಹ ತತ್ವಜ್ಞಾನಿಗಳು 17 ಮತ್ತು 18 ನೇ ಶತಮಾನಗಳಲ್ಲಿ ಅಭಿವೃದ್ಧಿಪಡಿಸಿದರು. U.S., ಭಾರತದಂತಹ ಪ್ರಜಾಪ್ರಭುತ್ವ ದೇಶಗಳಲ್ಲಿ ರಾಜ ಕೀಯ ವ್ಯವಸ್ಥೆಯು ಸಾಮಾಜಿಕ ಒಪ್ಪಂದದ ಸಿದ್ಧಾಂತವನ್ನು ಆಧರಿಸಿಯೇ ಅಧಿಕಾರ ಹೊಂದಿರುವುದು.

ಭಾರತದಲ್ಲಿ ಕಂಡು ಬರುವ ಪ್ರಭುತ್ವನ್ನು ಅರಿಸ್ಟಾಟಲ್ ಚೌಕಟ್ಟಿನಲ್ಲಿ ಇಟ್ಟು ನೋಡಿದಾಗ ಎರಡು ರೀತಿಯ ಸಿದ್ಧಾಂತಗಳು ಸಮಿಳಿತಗೊಂಡಿರುವುದು ನೇರವಾಗಿ ವ್ಯಕ್ತವಾಗುತ್ತದೆ. ಮೊದಲನೆಯದು ಬಲ ಸಿದ್ಧಾಂತ ಮತ್ತು ವಿಕಸನ ಸಿದ್ಧಾಂತವು ಚೆನ್ನಾಗಿ ಮಿಳಿತವಾಗಿ ರೂಪಿತವಾದ ಪ್ರಭುತ್ವವೆಂದು ಹೇಳಬಹುದು. ಇದರ

ಜೊತೆಗೆ ವಿಶ್ವದಲ್ಲೇ ಎಲ್ಲೂ ಕಾಣದಂತಹ ಮತ್ತೊಂದು ವರ್ಗ ಕೇಂದ್ರಿತವಾದ ವರ್ಣಾಶ್ರಮದ ನೆಲೆಯಲ್ಲಿ ರೂಪಿತವಾದ ಪ್ರಭುತ್ವದ ವಿಜೃಭಂಣೆಯನ್ನು ಭಾರತದ ಚರಿತ್ರೆಯಲ್ಲಿ

ಪ್ರಾಚೀನ ಕರ್ನಾಟಕದ ಇತಿಹಾಸವನ್ನು ಅರಿಯಬೇಕಾದರೆ ಅಶೋಕನ ಕಾಲದ ದಕ್ಷಿಣಭಾರತವನ್ನು ತಿಳಿಯಬೇಕಾಗುತ್ತದೆ. ಅಶೋಕನ 13ನೆಯ ಮಹಾಶಾಸನವು ಮೌರ್ಯಸಾಮ್ರಾಜ್ಯದ ಜನಾಂಗಗಳನ್ನು ಹೆಸರಿಸುತ್ತ ಭೋಜ, ಪಿತಿನಿಕ, ಪಾರಿಂದಗಳ ಜೊತೆಗೆ ಆಂಧ್ರರನ್ನು ಹೆಸರಿಸಿದೆ. 2ನೆಯ ಮಹಾಶಾಸನವು ಅವನ ಸಾಮ್ರಾಜ್ಯದ ಹೊರಗಿದ್ದ ದಕ್ಷಿಣದ ರಾಜ್ಯಗಳನ್ನು ಹೇಳುತ್ತ ಚೋಳ, ಪಾಂಡಿಯ, ಕೇರಳಪುತ್ರ, ಸಾತ್ಯಪುತ್ರ ಮತ್ತು ತಾಮ್ರಪರ್ಣಿ(ಶ್ರೀಲಂಕ)ಗಳನ್ನು ಹೆಸ ರಿಸಿದೆ.[1] ಇದಕ್ಕೂ ಪೂರ್ವದಲ್ಲಿ ಸಂಸ್ಕೃತ ಭಾಷಿಕರು ದಕ್ಷಿಣದವರನ್ನು ಅದರಲ್ಲೂ ತಮಿಳರನ್ನು 'ದ್ರಾವಿಡ'ರೆಂದು ಗುರುತಿಸಿದರು. ಪಾಲಿ–ಪ್ರಾಕೃತ ಭಾಷೆಗಳು ಮತ್ತು ಆರಂಭ ಕಾಲದ ವಿದೇಶಿಯರು ಇವರನ್ನು ದಮಿಳ, ದ್ರಮಿಳ, ದಮಿಳರಪ್ಪ, ದೈಮಿರಿಸ್ ಎಂದು ಕರೆದರು.[2] ಅಂದರೆ ಭಾಷೆಯ ತಳಹದಿಯ ಮೇಲೆ ತಮ್ಮನ್ನು ಗುರುತಿಸಿಕೊಳ್ಳುವ ರೂಢಿ ದ್ರಾವಿಡರಲ್ಲಿ ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟು ಜನರಲ್ಲಿ ಇತ್ತು. ಇವರಿಗೆ ಸ್ವಂತದ್ದೆಂಬ ಭಾಷೆ, ಜನಪದ, ಸಂಸ್ಕೃತಿ ಇದ್ದರೂ ಲಿಪಿ ಮಾತ್ರ ಇರಲಿಲ್ಲ. ಅವರು ಇತಿಹಾಸದಿಂದ ಮರೆಯಾಗಲು ಇದು ಪ್ರಮುಖ ಕಾರಣವಾಯಿತು. ಇದು ಕೇವಲ ತಮಿಳರ ಸಮಸ್ಯೆಯಾಗಿರದೆ ಭಾರತದ ಎಲ್ಲ ಪ್ರಧಾನ ಭಾಷಿಕರದೂ ಆಗಿದೆ. ಹೀಗಾಗಿ ಬ್ರಾಹ್ಮಿ ಏಕೈಕ ಲಿಪಿಯಾಗಿ ಹೊರಹೊಮ್ಮಿತು.

ಅಶೋಕನ ಹದಿನೆಂಟು ಚಿಕ್ಕಗಾತ್ರದ(ಮೈನರ್ ಎಡಿಕ್ಸ) ಶಾಸನಗಳಲ್ಲಿ ಒಂಬತ್ತು ಕರ್ನಾಟಕದಲ್ಲಿವೆ. ಇವು ಒಂದು ರೀತಿಯಲ್ಲಿ ಅಶೋಕನ ಸಾಮ್ರಾಜ್ಯದ ಗಡಿಯನ್ನು ಸೂಚಿಸುತ್ತವೆ. ಅಂದರೆ ಅಶೋಕನ ಸಾಮ್ರಾಜ್ಯವು ಕರ್ನಾಟಕದಲ್ಲಿ ಸನ್ನತಿಯಿಂದ (ಕಲಬುರ್ಗಿ) ಬ್ರಹ್ಮಗಿರಿಯವರೆಗೆ(ಚಿತ್ರದುರ್ಗ) ವ್ಯಾಪಿಸಿತ್ತು. ಅಶೋಕನ ಶಾಸನಗಳು ಭೋಜ, ರಾಷ್ಟ್ರೀಕ, ಆಂಧ್ರ ಮತ್ತು ಪುಲಿಂದರನ್ನು ಹೆಸ ರಿಸಿವೆ. ಇವು ಆ ಕಾಲದ ಆಡಳಿತ ವಿಭಾಗಗಳಾಗಿವೆ. ಭೋಜವನ್ನು ಮಹಾಭೋಜ ಮತ್ತು ರಾಷ್ಟಕವನ್ನು ಮಹಾರಥಿಕರು ಆಳುತ್ತಿದ್ದರು. ಬ್ರಹ್ಮಗಿರಿಯ ದಕ್ಷಿಣ ಮತ್ತು 'ತಮಿಳಗಂ'ನ ಉತ್ತರಕ್ಕಿದ್ದ ಭೂಭಾಗವನ್ನು ಅಶೋಕನು ಸ್ವತಂತ್ರವಾಗಿ ಆಳುತ್ತಿದ್ದ ರಾಜರಿಗೆ ಬಿಟ್ಟುಕೊಟ್ಟನು. ಇದರಲ್ಲಿ ಬನವಾಸಿ ಮತ್ತು ಮಹಿಷಮಂಡಲಗಳೂ ಸೇ ರಿರಬೇಕು.

ತಮಿಳಗಂನ ಪಶ್ಚಿಮೋತ್ತರದಲ್ಲಿ ತಮಿಳೇತರ ಸ್ವತಂತ್ರ ರಾಜ್ಯವಿತ್ತೆಂದು ಶಂಗಂ

ಕವಿಗಳೇ ಒಪ್ಪಿಕೊಂಡಿದ್ದಾರೆ. ಇದನ್ನು ತಮಿಳು ಭಾಷೆಯಲ್ಲಿ 'ಎರುಮೈನಾಡು', 'ಎರುಮೈ ನಲ್‌ನಾಡು' ಎಂದು ಕರೆದಿದ್ದಾರೆ. ಎರುಮೈ ಎಂಬುದಕ್ಕೆ ಎಮ್ಮೆ. ಮಹಿಷ ಮೊದಲಾದ ಅರ್ಥಗಳನ್ನು ಎಸ್. ಶೆಟ್ಟರ್ ನೀಡಿದ್ದಾರೆ.[3] ದ್ರಾವಿಡ ಮೂಲದ 'ಎರುಮೈ' ಪದದ ಕನ್ನಡ ಅರ್ಥ 'ಎಮ್ಮೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಶಂಗಂ ಸಾಹಿತ್ಯ ಹೇಳುವ ಎರುಮೈ ಊರವರು ಮತ್ತು ಕನ್ನಡದ ಎಮ್ಮೆ ಊರವರು(ಮ್ಮಿಗನೂರು, ಎಮನೂರು ಇತ್ಯಾದಿ) ಪದಗಳು ಒಂದೇ ಅರ್ಥವನ್ನು ನೀಡುತ್ತವೆ. ಕನ್ನಡದ ಎಮ್ಮೆ ಪದವು ಸಂಸ್ಕೃತಕ್ಕೆ ತಿರುಗಿ ಮಹಿಷವಾಗಿದೆ. ಅಂದರೆ ಸಂಸ್ಕೃತದ ಮಹಿಷಾಸುರನ ಕಥೆಗೂ ಕನ್ನಡದ ಮೈಸೆ ಗ್ರಾಮಕ್ಕೂ ತಳುಕು ಹಾಗಿದ ವಿದ್ವಾಂಸರು ಮಹಿಷ>ಮೈಸ = ಎಮ್ಮೆ ಎಂದು ತಪ್ಪು ಅರ್ಥವನ್ನೇ ಹೇಳುತ್ತ ಬಂದಿದ್ದಾರೆ. ಆದರೆ ಮೈಸೂರು, ಹುಣಸೂರು ಗ್ರಾಮಗಳು ಜನಾಂಗವಾಚಿ(ಎರುಮೆ) ಪದಗಳಾಗಿವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಅವು ವ್ಯಕ್ತಿನಾಮವಾಚಿಯಾಗಿವೆ.[4]

ಶಂಗಂ ಸಾಹಿತ್ಯ ಹೇಳುವ ಎರುಮೈನಾಡು ಈಗಿನ ಆಂಧ್ರಪ್ರದೇಶ ಮತ್ತು ಕರ್ನಾಟಕದ ದಕ್ಷಿಣಭಾಗವನ್ನು ಒಳಗೊಂಡಿರಬೇಕು. ಆಂಧ್ರಪ್ರದೇಶದ ಕನ್ನಡ ಶಾಸನ ಗಳಲ್ಲಿ ಕಾಣಸಿಗುವ 'ರೇನಾಡು' ಆಡಳಿತ ವಿಭಾಗದ ಮೂಲರೂಪ 'ಎರುಮೆನಾಡು' ಆಗಿರಬೇಕು. ಇದು ಬಹುಶಃ ಎಜುಮೆ>ಎರುಮೆ>(ಎಮ್ಮೆ) ಎರೆ>ರೇ ಎಂದು ಬದಲಾಗಿರ ಬೇಕು. ಅಂದರೆ 'ಎರುಮೆ' ಪದದ ಸಣ್ಣಿಸಿದ ರೂಪ 'ರೇ' ಆಗಿದೆ. ಎಜಿಯಪ್ಪ, ಎರೆಯಮ ಮೊದಲಾದ ವ್ಯಕ್ತಿ ನಾಮಗಳನ್ನು ಈ ಭಾಗದಲ್ಲಿ ಹೆಚ್ಚಾಗಿ ಕಾಣುತ್ತೇವೆ. ಇದು ಮೂಲತಃ ಪ್ರಕೃತಿವಾಚಿಯಾಗಿದ್ದು. ಮುಂದೆ ಜನಾಂಗವಾಚಿಗೆ ತಿರುಗಿರಬೇಕು. ತಮಿಳುಗಂನ ಪಶ್ಚಿಮೋತ್ತರದಲ್ಲಿ ಬರುವ ಇದು ಪ್ರಾಚೀನ ಕರ್ನಾಟಕದ ಭಾಗವೇ ಆಗಿರುವುದರಿಂದ ಡಾ. ಶೆಟ್ಟರ್ ಅವರು ಹೇಳುವ ಮಹಿಷಮಂಡಲವೂ ಇದರಲ್ಲಿ ಸೇರಿರಬೇಕು. ಈ ಪ್ರದೇಶಕ್ಕೆ ವಡುಗರ ನಾಯಕರಾದ 'ಎರುಮೈ ಊರವರು' ಒಡೆಯ ರಾಗಿದ್ದರು. 'ವಡುಗವಳಿ–12000' ಹೆಸರಿನ ಆಡಳಿತ ವಿಭಾಗವು ಗಂಗಮಂಡಲ ದಲ್ಲಿರುವುದನ್ನು ಗಮನಿಸಬೇಕು. ಇದು ತಮಿಳಗಂನ ಬಡಗ(=ಉತ್ತರ) ದಿಕ್ಕಿಗೆ ಇದೆ. ಕನ್ನಡದಲ್ಲಿ ಬ>ವ ಬದಲಾವಣೆ ಸಾಮಾನ್ಯವಾಗಿದೆ. ಕ್ರಿ.ಶ. 1ನೆಯ ಶತಮಾನದ ಸಿತ್ತನ್‌ವಾಸಲ್ ತಮಿಳುಬ್ರಾಹ್ಮ ಶಾಸನದಲ್ಲಿಯೂ ಇದರ ಉಲ್ಲೇಖವಿದೆ.[5] ಆದಿಕದಂಬ– ಬಾದಾಮಿ ಚಾಲುಕ್ಯರ ಕಾಲಗಳಲ್ಲಿ ಕರ್ನಾಟಕದ ಆಡಳಿತ ವಿಭಾಗಗಳು ವಿಸ್ತತಗೊಂಡಾಗ ಪುನ್ನಾಟ(ಇದರ ಭಾಗವಾದ ಮೈಸೆ). ವಡುಗವಳಿ ಮತ್ತು ರೇನಾಡುಗಳೂ ಪ್ರತ್ಯೇಕ ವಿಭಾಗಗಳಾಗಿ ರೂಪುಗೊಂಡಿರಬೇಕು.

ತಮಿಳುನಾಡಿನ ಪಾಂಡ್ಯರ ಮೇಲೆ ದಂಡೆತ್ತಿ ಹೋದ ಏಳು ಪ್ರಧಾನ

ರಾಜಶಕ್ತಿಗಳಲ್ಲಿ ಎರುಮೈಗಳೂ ಸೇರಿದ್ದಾರೆ. 'ಎರುಮೈನಲ್‌ನಾಡು'ವಿನ ಗಡಿ ಒಂದು ಕಾಲದಲ್ಲಿ 'ಆಯಿರಿ' ನದಿಯಿಂದ ಗುರುತಿಸಲ್ಪಡುತ್ತಿತ್ತು. ಈ ನದಿಗೂ ಮತ್ತು ಐವಾರ್ ಬೆಟ್ಟ ಪ್ರದೇಶಕ್ಕೂ ಸಂಬಂಧವಿದ್ದರೆ ಇದರ ಗಡಿಯು ದಿಂಡಿಗಲ್ ಜಿಲ್ಲೆಯ ವಾಯವ್ಯದ ವರೆಗೂ ವಿಸ್ತರಿಸಿತ್ತೆಂದು ಹೇಳಬಹುದು. ಇವರನ್ನು 'ಕುಡನಾಡ–ಎರುಮೈ'ಗಳೆಂದು ಶಂಗಂ ಕವಿಗಳು ಗುರುತಿಸಿದ್ದಾರೆ. ಆದ್ದರಿಂದ ಇವರು ಕೊಡಗಿನ ಒಡೆಯರೆಂದು ಹೇಳಬಹುದು.[6] ಅಂದರೆ ಎರುಮೈನಾಯಕರ ಅಧಿಕಾರವು ಮೈಸೂರು–ಕೊಡಗು–ದಿಂಡಿಗಲ್‌ವರೆಗೆ ವ್ಯಾಪಿಸಿದ್ದರೆ ಕೊಡಗಿನ ಒಡೆಯರ ಕಾರ್ಯಕ್ಷೇತ್ರ ತಂಜಾವೂರನ್ನೂ ತಲುಪಿತ್ತು. ಅಶೋಕನ 2ನೆಯ ಶಿಲಾಲಿಪಿಯಲ್ಲಿ ಚೋಡಾ(ಚೋಳ), ಪಂಡಿಂಮಾ(ಪಾಂಡ್ಯ) ಕೇರಲಪುತ್ರ(ಕೇರಳ), ತಾಂಮ್ರಪರ್ಣಿ ಮತ್ತು ಸತಿಯಪುತ್ರ ಎಂಬ ರಾಜ್ಯಗಳು ಅವನ ಸಾಮ್ರಾಜ್ಯದ ನೆರೆಯ ರಾಷ್ಟಗಳಾಗಿದ್ದವೆಂದು ಹೇಳಿದೆ. ಇವುಗಳಲ್ಲಿ ಚೋಳ, ಪಾಂಡ್ಯ ರಾಜ್ಯಗಳು ತಮಿಳುನಾಡಿಗೆ: ಕೇರಳವು ಕೇರಳ ರಾಜ್ಯಕ್ಕೆ ಮತ್ತು ತಾಮ್ರಪರ್ಣಿ ಶ್ರೀಲಂಕಾಕ್ಕೆ ಸಂಬಂಧಿಸಿವೆ. ಆದರೆ ಸತಿಯಪುತ್ರದಲ್ಲಿ ಭಾರತದ ಯಾವ ಪ್ರದೇಶ ಒಳಗೊಂಡಿತ್ತೆಂಬುದರ ಬಗ್ಗೆ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಅಶೋಕನ ಸಾಮ್ರಾಜ್ಯದ ಹೊರಗಿದ್ದ ದಕ್ಷಿಣ ಭಾರತದ ಮತ್ತೊಂದು ಪ್ರದೇಶವೆಂದರೆ ತುಳುನಾಡು. ಈಗಿನ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಈ ಭಾಗವು ಸತಿಯಪುತ್ರವಾಗಿತ್ತೆಂಬ ಸೂಚನೆಯನ್ನು ವಿನ್ಸೆಂಟ್ ಸ್ಮಿತ್ ಅವರು ನೀಡಿದ್ದಾರೆ. ಕೇರಳದ ಉತ್ತರಕ್ಕಿರುವ ಘಟ್ಟಕ್ಕೆ ಸಹ್ಯಾದ್ರಿಯೆಂಬ ಹೆಸರಿದೆ. ವಾಸ್ತವವಾಗಿ ಇದು ತುಳುನಾಡಿನ ಪೂರ್ವಕ್ಕಿರುವ ಘಟ್ಟವಾಗಿದೆ. ಕೇರಲ ಪತ್ರವು ಅಶೋಕನ ಶಾಸನಗಳಲ್ಲಿ ಕೇತಲಪುತ್ರವಾದಂತೆ ಸಂಸ್ಕೃತದ 'ಸಪುತ್ರ'ವು ಪ್ರಾಕೃತಕ್ಕೆ ತಿರುಗಿ ಸತಿಯಪುತ್ರವಾಗಿರಬೇಕು.[7]

ಅಶೋಕನ ಕಾಲದಲ್ಲಿ ಕನ್ನಡನಾಡು ಮಹಿಷಮಂಡಲ, ಬನವಾಸಿಮಂಡಲ, ಸತಿಯ ಪುತ್ರ ಮತ್ತು ಸುವರ್ಣಗಿರಿ ಎಂಬ ಆಡಳಿತ ವಿಭಾಗಗಳನ್ನು ಹೊಂದಿತ್ತು. ಇವು ಕ್ರಮ ವಾಗಿ ಹಳೆಯ ಮೈಸೂರು, ಸಹ್ಯಾದ್ರಿಘಟ್ಟ(ಶಿವಮೊಗ್ಗ–ಕಾರವಾರ), ಕರಾವಳಿ ಪ್ರದೇಶ(ಉಡುಪಿ–ಮಂಗಳೂರು). ಮಧ್ಯ ಕರ್ನಾಟಕದ ಬಯಲು ಪ್ರದೇಶವನ್ನು (ಚಿತ್ರದುರ್ಗ–ದಾವಣಗೆರೆ–ಬಳ್ಳಾರಿ) ಒಳಗೊಂಡಿವೆ. ಇಲ್ಲಿಯ ಮಹಿಷಮಂಡಲ ಯಾವುದು? ಎಂಬುದರ ಬಗ್ಗೆ ಜೆ.ಎಫ್. ಫ್ಲೀಟ್ ಮತ್ತು ಬಿ.ಎಲ್. ರೈಸ್ರ ಮಧ್ಯೆ ಸುದೀರ್ಘವಾದ ಲೇಖನಗಳ ಸಮರವೇ ನಡೆದಿದೆ. ಮಾಹಿಷ್ಮತಿ(ನರ್ಮದಾ ನದಿಯ ಹತ್ತಿರ) ಮತ್ತು ಮೈಸೂರು ನಗರಗಳು ಇವರ ವಾದದ ಕೇಂದ್ರ ಸ್ಥಳಗಳಾಗಿವೆ.[8] ಕಲ್ಯಾಣ ಕರ್ನಾಟಕದ ಸನ್ನತಿಯಲ್ಲಿಯೂ ಅಶೋಕನ ಶಾಸನಗಳು ಸಿಕ್ಕಿವೆ. ಇದು ಯಾವ ಆಡಳಿತ ವಿಭಾಗಕ್ಕೆ ಸೇರಿತ್ತೆಂಬುದು

ತಿಳಿಯುವುದಿಲ್ಲ. ಗೋದಾವರಿ ನದಿಯಿಂದ ದಕ್ಷಿಣಕ್ಕಿರುವ ಭೂಭಾಗವನ್ನು (ಕರ್ನಾಟಕವೂ ಸೇರಿದಂತೆ) 'ದಕ್ಷಿಣಪಥ'ವೆಂದು ಕರೆಯಲಾಗಿದೆ.

ವಿಂಧ್ಯ ಪರ್ವತ ಶ್ರೇಣಿಯಿಂದ ದಕ್ಷಿಣದಲ್ಲಿ ಸಮುದ್ರಕ್ಕೆ ಚಾಚಿಕೊಂಡು ಪರ್ಯಾಯ ದ್ವೀಪವೆನಿಸಿಕೊಂಡಿರುವ ವಿಶಾಲ ಭೂಭಾಗವನ್ನು ಪ್ರಾಚೀನ ಕಾಲದಿಂದಲೂ 'ದಕ್ಷಿಣಾಪಥ', 'ದಕ್ಷಿಣ ಭಾರತ' ಎಂದು ಕರೆಯಲಾಗಿದೆ. ಒಟ್ಟಿನಲ್ಲಿ ವಿಂಧ್ಯ ಪರ್ವತದಿಂದ ದಕ್ಷಿಣಕ್ಕೆ ಸಮುದ್ರದಿಂದ ಆವೃತವಾಗಿರುವ ಕನ್ಯಾಕುಮಾ ರಿಯವರೆಗಿನ ಭೂಭಾಗವನ್ನು 'ದಕ್ಷಿಣ ಭಾರತ' ಎಂದು ಕರೆಯಲಾಗಿದೆ. ಈ ಭೂಪ್ರದೇಶವನ್ನು 'ದಖನ್ ಪ್ರಸ್ಥಭೂಮಿ'ಯೆಂದೂ ಕರೆಯಲಾಗಿದೆ. ದಖನ್ ಪ್ರಸ್ಥಭೂಮಿಯಲ್ಲಿ ಕರ್ನಾಟಕ ಮತ್ತು ಆಂಧ್ರದೇಶಗಳು ಎರಡು ಪ್ರಮುಖ ದಕ್ಷಿಣದ ರಾಜ್ಯಗಳು ಇವು ವಿದ್ಯಾಚಲದ ದಕ್ಷಿಣಕ್ಕೆ ನೆಲೆಸಿದ್ದು, ಪ್ರಸ್ಥಭೂಮಿಯ ಆಯಕಟ್ಟಿನ ಭೂಪ್ರಾಂತಗಳಾಗಿವೆ. ಇವು ಶ್ರೀಮಂತ ಸ್ವಾಭಾವಿಕ ಸಂಪನ್ಮೂಲಗಳಿಂದ ಕೂಡಿದ್ದು ಕಾಡು, ಮೇಡು, ಪರ್ವತ, ನದಿ, ಬಯಲುಸೀಮೆ ಮತ್ತು ಕರಾವಳಿಗಳಿಂದ ಕೂಡಿದ ಐತಿಹಾಸಿಕ ನೆಲೆಗಳಾಗಿವೆ. ಆದ್ದರಿಂದ ಕರ್ನಾಟಕ ಮತ್ತು ಆಂಧ್ರದೇಶಗಳು ಪ್ರಾಚೀನ ಕಾಲದಿಂದಲೂ ಉತ್ತಮ ಸಂಬಂಧ ಹೊಂದಿರುವುದನ್ನು ಕಾಣಬಹುದು.

**ಅಡಿಟಿಪ್ಪಣಿಗಳು:**

1. ಸುಬ್ರಮಣಿಯನ್ ಎನ್. ನಿರಂಜನ (ಅನು). (1980). ಸಂಗಮ್ ರಾಜಕೀಯ–ಸಾಮಾಜಿಕ ವ್ಯವಸ್ಥೆ. ಜನತಾ ಸಾಹಿತ್ಯ. ಮೈಸೂರು. ಪು.ಸಂ. 15
2. ಶೆಟ್ಟರ್ ಷ. (2010). ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ. ಅಭಿನವ. ಬೆಂಗಳೂರು. ಪು.ಸಂ. 24
3. ಅದೇ. ಪು.ಸಂ. 121 & 138
4. ಮಯಿ + ಚೆಯ್ > ಮಯಿಸೆಮ್ + ನ + ಊರು > (ಮಯಿಸಮ + ನ + ಊರು) ಮೈಸೂರು; ಪುಣು + ಚೆಯ್ > ಪುಣುಸೆಯ + ನ + ಊರು > (ಪುಣುಸಮ + ನ + ಊರು) ಪುಣುಸೂರು > ಹುಣುಸೂರು. ಇಲ್ಲಿ ಮಯಿಚ ಮತ್ತು ಪುಣುಚ ಎಂಬವು ವ್ಯಕ್ತಿನಾಮಗಳಾಗಿವೆ.
5. ಶೆಟ್ಟರ್ ಷ. (2010). ಶಂಗಂ ತಮಿಳಗಂ ಮತ್ತು ಕನ್ನಡ ನಾಡು–ನುಡಿ. ಅಭಿನವ. ಬೆಂಗಳೂರು. ಪು.ಸಂ. 24
6. ಅದೇ. ಪು.ಸಂ. 28
7. ಅದೇ. ಪು.ಸಂ. 152
8. ರಮೇಶ ಕೆ.ವಿ. (1969). ತುಳುನಾಡಿನ ಇತಿಹಾಸ. ಗೀತಾಬುಕ್ ಹೌಸ್. ಮೈಸೂರು. ಪು.ಸಂ. 18